ಶ್ರೀ ಹೆಚ್. ಶಿವಪ್ಪ.—ಪ್ರತ್ಯೇಕವಾಗಿ ಮಾಡಿ; ಒಬ್ಬಬ್ಬರು ಎ ೫. ಗಳನ್ನು ಕೊಟ್ಟು, ತೀಪ್ರವಾಗಿ ಕೆಲಸ ಮಾಡಿಸಬಹುದು; ಇದರ ಬಗ್ಗೆ ಯೋಚನೆ ಮಾಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯಕ್ಕೆ ಒಂದು ವಿಭಾಗ ಮಾಡುವು ದರಿಂದ ಅದಕ್ಕೆ ಬೇಕಾದಂತ ಮಿಷನರಿಗಳು, ಸಾಮಾನು ಸರಂಜಾಮುಗಳು ಒದಗಿಸುವುದಕ್ಕೆ ಕಷ್ಟ ಇದೆ. ಇರತಕ್ಕಂಥ ವಿಭಾಗಗಳಲ್ಲಿರತಕ್ಕ ಸಾಮಗ್ರಿಗಳನ್ನು ಮತ್ತು ವಾಹನಗಳನ್ನು ಇತರೇ ಸಿಬ್ಬಂದಿ ವರ್ಗ ದವರನ್ನು ಬಳಸಿಕೊಂಡು ಕೆಲಸ ಮಾಡುವುದರಿಂದ ಕೆಲಸ ಚುರುಕಾಗಿ ನಡೆಯುತ್ತದೆ. ಬೆಂಗಳೂರು ವಿಭಾಗ ಮಾಡಿ; ಬೆಳಗಾಂನಲ್ಲಿ ಕೆಲಸ ಮಾಡಬೇಕೆಂದು ಬಹಳ ಕಷ್ಟವಾಗುತ್ತದೆ. ಕೆಲವು ಕಡೆ ರಸ್ತೆಗಳು ಚೆನ್ನಾಗಿಲ್ಲ; ಹೆಚ್ಚು ಹಣ ಬೇಕಾಗುತ್ತದೆ. ಈಗಾಗಲೇ ಮಾನ್ಯ ಹಣಕಾಸಿನ ಸಚಿವರಲ್ಲಿ ಮಾತನಾಡಿ ೭೦ ಲಕ್ಷ ರೂಪಾಯಿಗಳನ್ನು ಪಡೆದಿದ್ದೇವೆ. ಇನ್ನಷ್ಟು ಹಣ ಪಡೆದುಕೊಂಡು ರಸ್ತೆಗಳನ್ನು ಚೆನ್ನಾಗಿ ಇಡುವುದಕ್ಕೆ ವ್ಯವಸ್ಥೆ ಮಾಡಲಾಗುವುದು.

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ರಾಜ್ಯದಲ್ಲಿರತಕ್ಕ ಪ್ರತಿಯೊಂದು ಸಕ್ಕರೆ ಕಾರ್ಖಾನೆ ಗಳಿಂದಲೂ ಕಳೆದ ಆರು ವರ್ಷಗಳಿಂದಲೂ ತೆರಿಗೆಯನ್ನು ವಸೂಲ್ಮಾಡುತ್ತಿದ್ದೀರಿ. ವಸೂಲಾದಂತ ಹಣದಲ್ಲಿ ಕನಿಷ್ಟ ೧೦ ಭಾಗವನ್ನು ಖರ್ಚು ಮಾಡಿಲ್ಲ. ಪ್ರತಿಯೊಂದು ಫ್ಯಾಕ್ಟರಿಯಿಂದಲೂ ಕನಿಷ್ಟ ಹತ್ತು ಲಕ್ಷ ರೂಪಾಯಿ ಬರುತ್ತದೆ. ಹೈಪವರ್ ಕಮಿಟಿಯವರು ಕೂಡ ಈ ಹಣ ಖರ್ಚು ಮಾಡುವು ದಕ್ಕೆ ಒಪ್ಪಿದ್ದರು. ಇದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಇರತಕ್ಕ ನಿರ್ದೇಶನದ ಪ್ರಕಾರ ಒಟ್ಟು ಸಂಗ್ರಹಣೆ ಆಗತಕ್ಕ ಹಣದಲ್ಲಿ ಎಂಟನೇ ಒಂದು ಭಾಗ ಅಂದರೆ ಎರಡು ರೂಪಾಯಿ ರಸ್ತೆಗೋಸ್ಕರ ಖರ್ಚು ಮಾಡಬೇಕಾ ದಂಥಾದ್ದು ಇದೆ. ಅದರ ಪ್ರಕಾರ ೪೦ ಲಕ್ಷ ರೂಪಾಯಿ ಬರಬೇಕು. ೭೦ ಲಕ್ಷ ರೂಪಾಯಿ ಕೊಡ ಲಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಆ ರೀತಿ ಹೇಳಿದ್ದರೆ. ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಎಂ.ಎಸ್. ಆತ್ಮಾನಂದ.—ಸಕ್ಕರೆ ಕಂಪನಿ ಪ್ರದೇಶದಲ್ಲಿರತಕ್ಕ ರಸ್ತೆಗಳಿಗೆ ಖರ್ಚು ಮಾಡು ತ್ತಿರುವ ಹಣ ಸಾಲದು, ಅಲ್ಲಿ ೧೦–೧೨ ಟನ್ ಕಬ್ಬು, ಲಾರಿಗಳು ಸಾಗಿಸಿಕೊಂಡು ಬರಬೇಕಾಗುತ್ತದೆ. ಆದ್ದರಿಂದ, ಈಗ ಪ್ರತಿ ಕಿಲೋಮೀಟರ್‌ಗೆ ಏನು ಹಣ ಖರ್ಚು ಆಗತ್ತಿದೆ. ಅದಕ್ಕಿಂತಲೂ ಹೆಚ್ಚು ಹಣ ಖರ್ಚು ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆಯೇ?

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಕಿಲೋಮೀಟರ್ ರಸ್ತೆಗೆ ನಿರ್ವಹಣಾ ವೆಚ್ಚ ಒಂದು ಲಕ್ಷ ರೂಪಾಯಿ ಕೊಡುತ್ತಿದ್ದೇವೆ. ಈ ಎಲ್ಲಾ ರಸ್ತೆ, ವಿಲೇಜ್ ಸ್ಟ್ಯಾಂಡರ್ಡ್ ರೋಡ್ ಇರತಕ್ಕಂತಾದ್ದು, ಈಚೆಗೆ ದುಬಾರಿಯಾಗಿರುವುದರಿಂದ ಅದಕ್ಕೆ ಸಮನಾಗಿ ನಾವು ಜಾಸ್ತಿ ಮಾಡಬೇಕೆಂದು ಇದ್ದೇವೆ, ಜಾಸ್ತಿ ಮಾಡುವ ಬಗ್ಗೆ ಅದು ಪರಿಶೀಲನೆಯಲ್ಲಿದೆ. ಹಣಕಾಸಿನ ಇಲಾಖೆಯ ಜೊತೆ ಅದರ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ, ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

Housing facility to the Government Employees in Dharwar City.

725 Sri Bhavu Rao Deshpande (Dharwad).—Will the Minister for Housing and Urban Development be pleased to state.—

(a) the number of employees working in Dharwad in different Departments of the State Government ;

(b) whether scheme to provide residential accommodation to this class of employees will be taken up considering the actute scarcity of residential houses ?

SRI DHARAM SINGH (Minister for Housing and Urban Development).—

(a) 2,847.

(b) Residential accommodation has been provided by Government to 569 employees in respect of the above category of employee so far. Housing accommodation is yet to be made to the remaining employees. At present there is no immediate scheme either before the Karnataka Housing Board or the Government in this behalf.

ಶ್ರೀ ಬಾಪೂರಾವ್ ದೇಶಪಾಂಡೆ.—ಧಾರವಾಡದಲ್ಲಿ ೨,೮೪೭ ಜನ ರಾಜ್ಯ ಸರ್ಕಾರಿ ನೌಕರರಿದ್ದಾರೆ ಸರ್ಕಾರಿ ವ್ಯವಸ್ಥೆಯಲ್ಲಿ ೫೬೯ ಜನ ನೌಕರರಿಗೆ ವಸತಿ ವ್ಯವಸ್ಥೆಯಾಗಿದೆ ಎಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ. ಈಗ ಅಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ಸುಮಾರು ಎರಡೂವರೆ ಸಾವಿರ ನೌಕರರಿಗೆ ಮನೆಗಳು ಇಲ್ಲ. ಮನೆಗಳು ಕಟ್ಟುವಂಥ ಕೆಲಸ ನಿಲ್ಲುತ್ತಿದೆ. ಕೋ ಆಪರೇಟೀವ್ ಹೌಸಿಂಗ್ ಸೊಸೈಟಿಗೆ ಅನುಮತಿ ಇಲ್ಲ ಹುಡ್ಕೋ ಸ್ಕೀಮ್‌ನಲ್ಲಿ ಕಡಿಮೆ ಮಾಡಿದ್ದಾರೆ. ಮನೆಗಳ ಬಾಡಿಗೆ ಏರುತ್ತಿದೆ. ಮೊನ್ನೆ ನಮ್ಮ ಕಡೆಗೆ ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರ್ ಬಂದವರಿಗೆ ಮನೆ ಸಿಕ್ಕದೆ ಅವರು ಇನ್ನೂ ಸರ್ಕ್ಯೂಟ್ ಹೌಸ್‌ನಲ್ಲಿಯೇ ಉಳಿದುಕೊಂಡಿದ್ದಾರೆ ಪರಿಸ್ಥಿತಿ ಈ ರೀತಿ ಇದೆ. ಮನೆಗಳ ಬಾಡಿಗೆ ಹೆಚ್ಚು ಕೇಳುವುದೇ ಅಲ್ಲದೆ ೫–೧೦ ಸಾವಿರ ರೂಪಾಯಿ ಡಿಪಾಸಿಟ್‌ಕೇಳಂತ್ತಿದಾರೆ. ಆದ್ದರಿಂದ,ಪ್ರತಿ ವರ್ಷ ೨೦೦–೩೦೦ ಮನೆಗಳ ಪ್ರಕಾರ ನಾಲ್ಕೈದು ಸಾವಿರ ಮನೆಗಳನ್ನು ಕಟ್ಟಿಸಲಿಕ್ಕೆ ಪಂಚವಾರ್ಷಿಕ ಯೋಜನೆ ಪ್ರಕಾರ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ಧರ್ಮಸಿಂಗ್.—೨,೮೪೭ ಜನ ನೌಕರರಿಗೂ ಮನೆಗಳನ್ನು ಒದಗಿಸಿಲ್ಲ ಎಂದು ನಮ್ಮ ಉತ್ತರದಲ್ಲಿ ಹೇಳಿದ್ದೇವೆ. ೫೬೯ ಜನ ನೌಕರರಿಗೆ ಮಾತ್ರ ಮನೆಗಳನ್ನು ಒದಗಿಸಲಾಗಿದೆ. ಹೌಸಿಂಗ್ ಬೋರ್ಡ್‌ನಿಂದ ಕೂಡ ೫೮೮ ಮನೆಗಳು ತಯಾರಾಗತಕ್ಕ ಹಂತದಲ್ಲಿ ಬೇರೆ ಸ್ಕೀಮ್ ತೆಗೆದುಕೊಂಡಿದ್ದಾರೆ, ಕೃಷ್ಣಾಪುರದಲ್ಲಿ, ಕೇಶವಪುರದಲ್ಲಿ, ಗೋಪಿನ್‌ಕೊಪ್ಪದಲ್ಲಿ ೮೨೫ ಮನೆಗಳನ್ನು ಕಟ್ಟತಕ್ಕಂಥ ಯೋಜನೆ ಹೌಸಿಂಗ್ ಬೋರ್ಡ್‌ನಲ್ಲಿ ಇದೆ. ಸಣ್ಣ ಸಣ್ಣ ಪ್ಯಾರಾ ಮೆಡಿಕಲ್, ವಿಲೇಜ್ ಅಕೌಂಟೆಂಟ್ ಗಳಿಗೆ. ರಾಜ್ಯದಲ್ಲಿ ೫೫೫೦ ಮನೆಗಳನ್ನು ಕಟ್ಟಿಸಬೇಕೆಂದು ಮೂರುವರೆ ಕೋಟಿ ಯೋಜನೆ ಹಾಕಿಕೊಂಡಿದ್ದೇವೆ. ಹೌಸಿಂಗ್ ಬೋರ್ಡ್‌ನವರು, ಹುಡ್ಕೋದವರು, ೭,೬೦೦ ರೂಪಾಯಿಗಳ ಖರ್ಚಿನಲ್ಲಿ ಎರಡು ರೂಮು. ೮,೫೦೦ ರೂಪಾಯಿ ಖರ್ಚಿನಲ್ಲಿ ಎರಡು ರೂಮು ಕಟ್ಟಿಸುವುಂತಾದ್ದು ಇದೆ, ೩೫೦ ರೂಪಾಯಿ ಯಾರಿಗೆ ಮೊತ್ತ ಬರುತ್ತದೆ. ಅವರಿಗೆ ಅದು ಆಗಬೇಕು ಇವೊತ್ತು ಎಲ್ಲರಿಗೂ ಹೆಚ್ಚು ಬರುತ್ತಿದೆ. ಇವೊತ್ತು ನಾವು ಸೈಟ್ ಪರ್ಚೇಸ್, ಮತ್ತು ಹೌಸ್ ಪರ್ಚೇಸ್‌ಗೆ ಲೋನ್ ಕೊಡುತ್ತಿದ್ದೇವೆ. ಕ್ಲಾಸ್ ಫೋರ್ ಎಂಪ್ಲಾಯೀಸ್‌ಗೆ ಧಾರವಾಡ ಜಿಲ್ಲೆಯಲ್ಲಿ ೩೦ ಸಾವಿರ ಸೈಟುಗಳನ್ನು ಕೊಡುವ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—೧೯೬೯–೭೦ರಲ್ಲಿ ಕರ್ನಾಟಕ ಗೃಹಮಂಡಲಿ ಮುಖಾಂತರ ಪ್ರತಿ ತಾಲ್ಲೂಕಿನಲ್ಲಿ, ಹಳ್ಳಿಗಳಲ್ಲಿ ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ಮನೆಗಳನ್ನು ಕಟ್ಟಿಸಲಿಕ್ಕೆ ಪ್ರಯತ್ನ ಮಾಡಿದರು. ಆ ಯೋಜನೆ ಮುಂದುವರಿಯುತ್ತಿದೆಯೇ ಇಲ್ಲ ನಿಂತು ಹೋಗಿದೆಯೇ ಇವೊತ್ತು ವಿಲೇಜ್ ಅಂಕೌಂಟೆಂಟ್‌ಗಳಿಗೆ ೫ ಸಾವಿರ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳುತ್ತಿದ್ದೀರಿ. ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೂ ಮನೆಗಳ ಅಗತ್ಯ ಬಹಳ ಇದೆ ಆದ್ದರಿಂದ, ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ಮನೆಗಳನ್ನು ಕಟ್ಟಿಸತಕ್ಕ ಯೋಜನೆಯನ್ನು ಏನಾದರೂ ನಿಲ್ಲಿಸಿದ್ದರೆ, ಅದನ್ನು ಪ್ರಾರಂಭಿಸುತ್ತೀರಾ ?

ಶ್ರೀ ಧರ್ಮಸಿಂಗ್.—ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಹಿಯಲ್ಲಿ ಮನೆಗಳನ್ನು ಕಟ್ಟಿಸತಕ್ಕ ಯೋಜನೆ ಆದೇ ರೀತಿ ನಡೆಯುತ್ತದೆ. ಇದರಲ್ಲಿ ನಾವು ೫ ೫೫೦ ಮನೆಗಳನ್ನು ವಿಲೇಜ್ ಅಕೌಂಟೆಂಟ್ ಗಳಿಗೆ, ಪ್ಯಾರಾ ಮೆಡಿಕಲ್ಸ್ ಇತರೆ ಡಿಪಾರ್ಟ್‌ಮೆಂಟ್‌ಗಳಿಗೆ ಸಣ್ಣ ಸಣ್ಣ ಹುದ್ದೆಗಳಲ್ಲಿರತಕ್ಕವರಿಗೆ ಕಟ್ಟಿಸಲಾಗುತ್ತಿದೆ.

ಶ್ರೀ ಬಾಪೂರಾವ್ ದೇಶಪಾಂಡೆ.—ಇವೊತ್ತು ಧಾರವಾಡ ಹಬ್ಬಳ್ಳಿ ಒಂದೇ ನಗರ ಇದೆ, ಹೆಚ್ಚಿನ ಸರ್ಕಾರಿ ಕಚೇರಿಗಳು, ವಿಭಾಗ ಮಟ್ಟದ್ದು, ಜಿಲ್ಲಾ ಮಟ್ಟದ್ದು ಧಾರವಾಡದಲ್ಲಿ ಇದೆ, ಧಾರವಾಡ ಘಟಕದಲ್ಲಿ ಹೆಚ್ಚಿನ ಮನೆಗಳನ್ನು ಕಟ್ಟಿಸತಕ್ಕದ್ದು ಕಾಣಿಸಿಲ್ಲ, ಧಾರವಾಡದಲ್ಲಿ ಹೆಚ್ಚು ಮನೆಗಳನ್ನು ಕಟ್ಟಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.—ಹೌಸಿಂಗ್ ಬೋರ್ಡ್ ಕಡೆಯಿಂದ ಧಾರವಾಡದಲ್ಲಿ ೮೨೦ ಮನೆಗಳನ್ನು ಕಟ್ಟಿಸತಕ್ಕ ಯೋಜನೆ ಹಾಕಿಕೊಂಡಿದ್ದಾರೆ. ಇವೊತ್ತು ೨,೨೪೦ ಜನ ಸರ್ಕಾರಿ ನೌಕರರು ಏನಿದ್ದಾರೆ ಅವರು ಬೇರೆ ಬೇರೆ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟವರು ಇದ್ದಾರೆ. ಎಲ್ಲಾ ಡಿಪಾರ್ಟ್‌ಮೆಂಟ್ ನವರಿಗೂ ಬರೆದು ಬಡ್ಜೆಟ್ ಪ್ರಾವಿಜನ್ ಮಾಡಬೇಕಾಗುತ್ತದೆ. ಪಿ. ಡಬ್ಲ್ಯು. ಡಿ. ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟಿನವರು, ಬಡ್ಜೆಟ್‌ನಲ್ಲಿ ಹಣ ಪ್ರೊವೈಡ್ ಮಾಡಿಕೊಂಡು ಮನೆಗಳನ್ನು ಕಟ್ಟಿಸಿಕೊಡತಕ್ಕದ್ದು ಹಾಕಿಕೊಂಡಿದ್ದಾರೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ. ಮಾನ್ಯ ಮಂತ್ರಿಗಳು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹಳ್ಳಿಯಲ್ಲಿ ಮನೆಗಳನ್ನು ಕಟ್ಟಿಸತಕ್ಕದ್ದು ನಡೆಯುತ್ತಿದೆ ಎಂದು ಹೇಳಿದರು. ಪ್ರತಿ ವರ್ಷ ಎಷ್ಟು ಮನೆಗಳನ್ನು ಕಟ್ಟಿಸಲಿಕ್ಕೆ ಯೋಜನೆ ಹಾಕಿಕೊಂಡಿದ್ದೀರಾ ?

ಶ್ರೀ ಧರ್ಮಸಿಂಗ್.—ಇದು ಧಾರವಾಡ ಜಿಲ್ಲೆಗೆ ಸಂಬಂಧಪಟ್ಟಂತೆ ಮಾತ್ರ ಪ್ರಶ್ನೆ ಇದೆ. ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಹಾಕಿದರೆ ಉತ್ತರ ಒದಗಿಸುತ್ತೇನೆ.

ಶ್ರೀಕೆ. ಹೆಚ್, ಹನುಮೇಗೌಡ.—ಹೋಬಳಿ ಮಟ್ಟದಲ್ಲಿ ಟ್ವಿನ್ ಕ್ವಾರ್ಟರ್ಸ್ ಕಟ್ಟತಕ್ಕ ಯೋಜನೆ ಇತ್ತು. ಇವುಗಳಲ್ಲಿ ಏನಾಗಿದೆ ಎಂದರೆ, ಕೆಲಸಕ್ಕೆ ಫೌಂಡೇಷನ್ ಹಾಕಿದ್ದಾರೆ. ಕೆಲವು ಅರ್ಧ ಕಟ್ಟಡಗಳಿಗಾಗಿ ನಿಂತಿವೆ. ಆ ಯೋಜನೆ ಕೆಲಸ ಏನಾದರೂ ಅರ್ಧಕ್ಕೆ ನಿಂತಿದ್ದರೆ, ಆ ಯೋಜನೆಯನ್ನು ಕಂಟಿನ್ಯೂ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.—ಈಗ ಹೊಸದಾಗಿ ೫,೫೦೦ ಕ್ವಾರ್ಟರ್ಸ್ ಏನು ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕೆ ಈಗಾಗಲೇ ಹಣ ಕೊಡಲಾಗಿದೆ. ಈಗ ಮಾನ್ಯ ಸದಸ್ಯರು ಹೇಳಿರುವಂಥಾದ್ದರ ಬಗ್ಗೆ ವಿಚಾರ ಮಾಡಿ ದುಡ್ಡು ಕೊಡುವ ಪ್ರಯತ್ನ ಮಾಡುತ್ತೇನೆ.

*Rural Water Supply Scheme in Afzalpur Taluk

861 SRI M. Y. PATIL (Afzalpur):—Will the Minister for Rural Development and Panchayatraj be pleased to State.—

(a) the amount sanctioned for Rural Water Supply Scheme in Afzalpur taluk so far;

(b) out of them, the number of schemes that came into operation, whether it has come to the notice of Government that the works are not being carried out properly though it has come into effect;

(c) if so, whether the Government would see that the remaining schemes would be done properly?

SRI B. RAMAIAH.—Minister for Rural Development and panchayatraj

(a) 29 Rural Water Supply Schemes have been sanctioned in Afzalpur taluk so far.

(b) Out of them, 15 Schemes have come into operation. The remaining schemes are under progress and it has not come to the